ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನವನ್ನು ಭೋಧಿಸಲಾದ ದಿನಾಂಕಃ 23.03.2026

ಪಾಟೀ ಸವಾಲು ಃ ಪ್ರತಿವಾದಿಗಳ ಪರ ಶ್ರೀ. ಬಿ.ಕೆ ವಕೀಲರಿಂದ

1. ವಾದಿಗಳು ನನ್ನ ಸೋದರತ್ತೆ ಮಕ್ಕಳು. ಪಿ ಡಬ್ಲ್ಯೂ 3 ರವರು ವಾದಿಗಳ ಸ್ವಂತ ಚಿಕ್ಕಮ್ಮನ ಮಗಳ ಮಗ. ನಮ್ಮ ಗ್ರಾಮದಿಂದ ವಾದಿಯರ ಗ್ರಾಮಕ್ಕೆ ಸುಮಾರು 15 ರಿಂದ 20 ಕಿ.ಮೀ ಅಂತರ ಇದೆ ಎಂದರೆ ಸರಿ. ನಾನು ಬಣ್ಣೇನಹಳ್ಳಿಯಲ್ಲಿ ಖಾಯಂ ವಾಸಿಯಾಗಿರುತ್ತೇನೆ ಎಂದರೆ ಸರಿ. ವಾದಿಗಳು ನಿವೇಶನಕ್ಕೆ ಸಂಬಂಧಪಟ್ಟಂತೆ ದಾವಾ ದಾಖಲಿಸಿರುತ್ತಾರೆ. ನಾನು ಈ ದಿನ ನಿವೇಶನದ ಸಂಬಂಧವಾಗಿ ಸಾಕ್ಷ್ಯ ನುಡಿಯಲು ನ್ಯಾಯಾಲಯಕ್ಕೆ ಹಾಜರಾಗಿರುತ್ತೇನೆ. ಸಾಮಾನ್ಯವಾಗಿ 150 ಅಡಿಕೆ ಸಸಿಗಳನ್ನು ಮತ್ತು 15 ತೆಂಗಿನ ಮರಗಳನ್ನು ಬೆಳೆಯಲು ಸುಮಾರು ಅರ್ಧ ಎಕರೆ ಜಮೀನು ಬೇಕು ಎಂದರೆ ಸರಿ. ನನಗೆ ದಾವಾ ಸಂಗತಿಗಳು ಗೊತ್ತಿಲ್ಲ ವಾದಿಗಳು ನನ್ನ ಸ್ವಂತ ಸಂಬಂಧಿಕರಾದ ಕಾರಣ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ತಿಳಿಸಿರುವ ಸಂಗತಿಗಳು ಗೊತ್ತು. ನ್ಯಾಯಾಲಯಕ್ಕೆ ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ವಾದಿಗಳಿಗೆ ಯಾವುದೇ ರೀತಿಯ ತೊಂದರೆ ಕೊಟ್ಟಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ.

(ದೇವರಾಜು ಹೆಚ್.ಆರ್.)
1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಕೆ.ಆರ್.ಪೇಟೆ.